**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**

**ಸಿ.ಸಿ. 30/2022**

**ಮಧ್ಯಂತರ ಅರ್ಜಿಯ ಆದೇಶದ ಮೇರೆಗೆ ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ದಿನಾಂಕಃ 26.12.2024** **ಪಿ ಡಬ್ಲ್ಯೂ01**

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

ನಾನು ಆರೋಪಿಗೆ ಸಾಲ ಮರುಪಾವತಿ ಮಾಡಲು ದಿಃ16.09.2021 ರಂದು ಮೌಖಿಕವಾಗಿ ಕೇಳಿದ್ದೇನು ಎಂದು ಪಿರ್ಯಾದಿಯ ಅರ್ಜಿಯಲ್ಲಿ ಮತ್ತು ಮುಖ್ಯ ವಿಚಾರಣೆಯಲ್ಲಿ ಬರೆಸಿದ್ದೇನೆ. ಈ ರೀತಿ ಬರೆಸಿಲ್ಲ ಎಂದರೆ ಸರಿ. ನಾನು ಆರೋಪಿಗೆ ಸಾಲ ಕೊಡುವ ಕಾಲಕ್ಕೆ ಶಿಕ್ಷಕನಾಗಿ ಕೆಲಸ ಮಾಡುತ್ತಿದ್ದೇನು ಎಂದರೆ ಸರಿ. 2021 ನೇ ಸಾಲಿನ ಮೇ ರಿಂದ ಸೆಪ್ಟೆಂಬರ್ ವರೆಗಿನ ವೇತನ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲಎಂದರೆ ಸರಿ. ಸಾಕ್ಷಿಯು ಮುಂದುವರೆದು ಬ್ಯಾಂಕ್ ಸ್ಟೇಟ್ ಮೆಂಟ್ ಸಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ. ನನ್ನ ಪಿರ್ಯಾದಿಯ ಅರ್ಜಿಯಲ್ಲಿ ಮತ್ತು ಮುಖ್ಯ ವಿಚಾರಣೆಯಲ್ಲಿ ನನಗೆ ತಿಂಗಳಿಗೆ ಎಷ್ಟು ಸಂಬಳ ಬರುತ್ತದೆ ಎಂದು ಬರೆಸಿಲ್ಲ ಎಂದರೆ ಸರಿ. ನಮ್ಮ ವೃತ್ತಿ ವಿಭಾಗದಲ್ಲಿ ಬೇರೆ ವ್ಯಕ್ತಿಗೆ ಸಾಲ ಕೊಡಬೇಕಾದರೆ, ಆಸ್ತಿ ಮತ್ತು ಬಂಗಾರ ಖರೀದಿಸಲು ನಮ್ಮ ಇಲಾಖೆಯ ಅನುಮತಿ ಪಡೆಯಬೇಕು ಎಂದರೆ ಸರಿ. ನಾನು ಅಂತಹ ಯಾವುದೇ ಅನುಮತಿ ಪಡೆದಿಲ್ಲ ಎಂದರೆ ಸರಿ. ನಾನು ಆರೋಪಿಗೆ 5 ಲಕ್ಷ ನಗದನ್ನು ಕೊಟ್ಟೆ ಎಂದು ಸೃಷ್ಟಿ ಮಾಡಿಕೊಂಡು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-5 ರಿಂದ 8 ಮತ್ತು 11 ರ ದಾಖಲೆಗಳು ಈ ಪ್ರಕರಣಕ್ಕೆ ಸಂಬಂಧ ಇರದೇ ಇದ್ದರೂ ಸಹ ನಾನು ಸೃಷ್ಟಿ ಮಾಡಿಕೊಂಡು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಿಪಿ-7 ರ ದಾಖಲೆಯಲ್ಲಿ ನಮೂದಿಸಿರುವ ಮಗಳ ಮದುವೆಗೆ 8 ಲಕ್ಷ ಹಣವನ್ನು ಪಡೆದಿರುತ್ತೀರಾ ಎಂದು ನಮೂದು ಇದೆ ಎಂದರೆ ಸಾಕ್ಷಿಯು ನಾವು ಹಣವನ್ನು ಪಡೆಯಬೇಕಾದರೆ ಮಕ್ಕಳ ಮದುವೆಗೆ ಅಥವಾ ಶಿಕ್ಷಣಕ್ಕೆ ಎಂದು ಎರಡೇ ಆಯ್ಕೆ ಇರುತ್ತದೆ ಆದ್ದರಿಂದ ಅದನ್ನು ಹಾಕಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ 8 ಲಕ್ಷ ಹಣವನ್ನು ನನ್ನ ಮಗಳ ಮದುವೆಗೆ ಖರ್ಚು ಮಾಡಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು, ಮದುವೆಯೂ ಮಾಡಿಲ್ಲ, ಖರ್ಚು ಮಾಡಿಲ್ಲ ಎಂದು ನುಡಿಯುತ್ತಾರೆ. ನನ್ನ ಪಿರ್ಯಾದಿ, ಮುಖ್ಯ ವಿಚಾರಣೆ ಮತ್ತು ನೋಟೀಸ್ ನಲ್ಲಿ ನನ್ನ ಮಗಳ ಮದುವೆಗೆ ಪಡೆದ ಹಣವನ್ನು ಆರೋಪಿಗೆ ನೀಡಿದ್ದೇನೆ ಎಂದು ಬರೆಸಿಲ್ಲ ಎಂದರೆ ಸರಿ. ನಿಪಿ-8 ರ ದಾಖಲೆಯ ಪ್ರಕಾರ ಮಂಜಪ್ಪರವರಿಗೆ ನನ್ನ ಜಮೀನನ್ನು ರೂ.15 ಲಕ್ಷಗಳಿಗೆ ಮಾರಾಟ ಮಾಡಿರುತ್ತೇನೆ ಎಂದರೆ ಸರಿ. ನಿಪಿ-8 ರ ಪ್ರಕಾರ ಸದರಿ ಜಮೀನನ್ನು ರೂ.4,43,000/-ಗಳಿಗೆ ನೋಂದಣಿ ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿ. ನಿಪಿ-9 ರ ಪ್ರಕಾರ ನನಗೆ ಬಂದ ರೂ.8,30,000/-ಗಳನ್ನು ದಿಃ31.08.2019 ರಂದು ವಿತ್ ಡ್ರಾ ಮಾಡಿರುತ್ತೇನೆ ಎಂದರೆ ಸರಿ. ನಿಪಿ-9 ರ ಪ್ರಕಾರ ಪುಟ ಸಂ.5 ರಲ್ಲಿ ದಿಃ 17.03.2020 ರಂದು ರೂ.5,50,000/-ಗಳನ್ನು ಬ್ಯಾಂಕ್ ನಿಂದ ವಿತ್ ಡ್ರಾ ಮಾಡಿಕೊಂಡಿರುತ್ತೇನೆ ಎಂದರೆ ಸರಿ. ಸದರಿ ದಿಃ31.08.2019 ಮತ್ತು

ದಿಃ 17.03.2020 ರಂದು ವಿತ್ ಡ್ರಾ ಮಾಡಿದ ಹಣವನ್ನು ಆರೋಪಿಗೆ ಸಾಲ ನೀಡಿದ್ದೇನೆ ಎಂದು ತೋರಿಸಲು ಯಾವುದೇ ದಾಖಲೆ ಇಲ್ಲ ಎಂದರೆ ಸರಿ. ನಿಪಿ–10 ರ ಪ್ರಕಾರ ದಿಃ 06.03.2021 ರಂದು ನನ್ನ ಖಾತೆಯಲ್ಲಿ ರೂ.19,339.15 ಗಳು ಮಾತ್ರ ಇತ್ತು ಎಂದರೆ ಸರಿ. ನನ್ನ ಹತ್ತಿರ ದಿಃ 08.06.2021 ಕ್ಕಾಗಲೀ, ದಿಃ 27.08.2021 ಕ್ಕಾಗಲೀ ರೂ.5 ಲಕ್ಷ ಗಳು ಇತ್ತು ಎಂದು ತೋರಿಸಲು ಯಾವುದೇ ದಾಖಲಾತಿ ಇಲ್ಲ ಎಂದರೆ ಸರಿ. ನಿಪಿ–1 ಚೆಕ್ ನ್ನು ಹಾಜರುಪಡಿಸುವ ಪೂರ್ವದಲ್ಲಿ ಆರೋಪಿಗೆ ಹಣ ಪಾವತಿ ಮಾಡುವಂತೆ ಯಾವುದೇ ನೋಟೀಸ್ ನೀಡಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು, ಮೌಖಿಕವಾಗಿ ಕೇಳಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಆರೋಪಿಯನ್ನು ಮೌಖಿಕವಾಗಿ ಕೇಳುವ ಸಂದರ್ಭದಲ್ಲಿ ಯಾವುದೇ ಲಿಖಿತ ಪತ್ರ ಬರೆಸಿಕೊಂಡಿಲ್ಲ. ಸಾಕ್ಷಿ ಮುಂದುವರೆದು, ಆರೋಪಿ ನನ್ನ ಮಾವನಾಗಿದ್ದರಿಂದ ಬರೆಸಿಕೊಂಡಿಲ್ಲ ಎಂದು ನುಡಿಯುತ್ತಾರೆ. ನನಗೆ ಮತ್ತು ನನ್ನ ಮಾವ ಆರೋಪಿಗೂ ಸಂಬಂಧ ಚೆನ್ನಾಗಿಲ್ಲದ ಕಾರಣ ನಾನು ಅವರ ಮನೆಗೆ ಹೋಗಿಯೇ ಇಲ್ಲ ಎಂದರೆ ಸರಿಯಲ್ಲ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು ಮುಂದೂಡಲಾಯಿತು.**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

Sd/-
1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಹರಿಹರ